Members' Representation.

ಶ್ರೀ ಬಿ. ಚೆನ್ನಬ್ಯಾರೆ ಗೌಡ (ಹೊಸಕೋಟೆ).—ಸ್ವಾಮಿ, ಈ ಸಭೆಯಲ್ಲಿ ಮುಖ್ಯ ಮಂತ್ರಿಗಳು ಇಲ್ಲ; ಬಾಕಿ ಮಂತ್ರಿಗಳೆಲ್ಲಾ ಎಲ್ಲಿ ಹೋದರೋ; ಬೀದಿಯಲ್ಲಿ ಜನ ಮಂತ್ರಿಗಳ ರಾಜೀನಾಮೆ ಕೊಟ್ಟರೆಂದು ಹೇಳುತ್ತಿದ್ದಾರೆ. ಅದು ಏನಾದರೂ ನಿಜವೋ ?

ಶ್ರೀ ಎಸ್. ಶಿವಪ್ಪ (ಶ್ರವಣಬೆಳುಗೊಳ).—ಸಭಾಪತಿಯವರೇ, ತಮ್ಮ ಮುಖಾಂತರ ಒಂದು ವಿಷಯವನ್ನು ವಿಮರ್ಶೆ ಮಾಡಬೇಕೆಂದಿದ್ದೇನೆ. ಇದು ಬಹಳ ಮುಖ್ಯವಾದ ವಿಚಾರ. ಈ ಹೊತ್ತು ಬ್ರೈಬರಿ ಬೆಂಚಿನಲ್ಲಿ ಕೇವಲ ಒಬ್ಬ ಮಂತ್ರಿಗಳು ಮಾತ್ರ ಇದ್ದಾರೆ. ಮುಖ್ಯ ಮಂತ್ರಿಗಳು ಮತ್ತು ಇತರ ಮಂತ್ರಿಗಳು ಇಲ್ಲದಿರುವುದಕ್ಕೆ ಏನಾದರೂ ಪ್ರಬಲವಾದ ಕಾರಣವಿರಬೇಕು. ಏಕೆಂದರೆ ಈಗ ಸಭೆಯಲ್ಲಿ ನಡೆಯುತ್ತಿರುವುದು ಬಹಳ ಮುಖ್ಯವಾದ ವಿಷಯ. ದೇಶದ ಆಡಳಿತ ನೀತಿಯನ್ನು ವಿಮರ್ಶೆ ಮಾಡತಕ್ಕ ಈ ಕಾಲದಲ್ಲಿ ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿಗಳಿಲ್ಲದಿರುವುದು, ಜೊತೆಗೆ ಇತರ ಮಂತ್ರಿಗಳೆಲ್ಲರನ್ನು ಕರೆದುಕೊಂಡು ಹೋಗಿರುವುದು ಸರಿಯಲ್ಲ. ಇಂಥ ಕಾರಣದಿಂದ ಅವರು ಈ ಸಭೆಯಲ್ಲಿರುವುದಕ್ಕೆ ಸಾಧ್ಯವಾಗಿಲ್ಲವೆಂಬುದನ್ನು ಈ ಸಭೆ ತಿಳಿಯುವುದಕ್ಕೆ ಅಪೇಕ್ಷಿಪಡುತ್ತದೆ; ಅದನ್ನು ಗೊತ್ತುಪಡಿಸಬೇಕೆಂದು ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿರುವ ಹಾಗೆ ಈಗ ಕೌನ್ಸಿಲ್ಲು ನಡೆಯುತ್ತಿದೆ. ಮುಖ್ಯ ಮಂತ್ರಿಗಳು ಇನ್ನು ಕೆಲವು ಮಂತ್ರಿಗಳು ಅಲ್ಲಿದ್ದಾರೆ. ಮಿಕ್ಕ ಮಂತ್ರಿಗಳು ಇನ್ನು ಸ್ವಲ್ಪ ಹೊತ್ತಿನಲ್ಲೇ ಈ ಸಭೆಗೆ ಬರುವವರಿದ್ದಾರೆ. ಇದರಿಂದಾಗಿ ಯಾರು ಈ ಸಭೆಯನ್ನು Disregard ಮಾಡಬೇಕೆಂದಾಗಲೀ, ತಾವು ಬಂದರೂ ನಡೆಯುತ್ತಿದೆ, ಇಲ್ಲದಿದ್ದರೂ ನಡೆಯುತ್ತದೆ ಎಂಬ ಭಾವನೆಯುಳ್ಳವರಾಗಲೀ ಆಗಿಲ್ಲವೆಂಬುದನ್ನು ನಾನು ಈ ಸಭೆಗೆ ತಿಳಿಸಬಯಸುತ್ತೇನೆ.

Motion of Thanks to the Governor's Address.

Debate continued.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಅಧ್ಯಕ್ಷರೇ, ನಾನು ನಿನ್ನೆಯ ದಿನ ಮಾತನಾಡುವಾಗ ಪಾನನಿರೋಧದ ಬಗ್ಗೆ ಮಾತನಾಡುತ್ತಿದ್ದೆ. ಈ ಪಾನನಿರೋಧ ಶಾಸನ ಜಾರಿಗೆ ಬಂದ ಪರಿಣಾಮವಾಗಿ ದೇಶದ ಜನತೆಯಲ್ಲಿ ಅಸಾಧಾರಣ ಜಾಗೃತಿಯುಂಟಾಗಲು ಕಾರಣವಾಗಿದೆ. ಜನಗಳಲ್ಲಿ ಕಾನೂನು ಮುಖಾಂತರವಾಗಿ ಈ ದುಷ್ಟ ಅಭ್ಯಾಸವನ್ನು ದೂರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಪ್ರಪಂಚದ ನಾನಾ ದೇಶಗಳಲ್ಲಿ ಈ ಬಗ್ಗೆ ಪ್ರಯತ್ನ ಪಟ್ಟು ಅದು ವಿಫಲವಾದ ದೆಸೆಯಿಂದ ಪಾನನಿರೋಧ ಶಾಸನ ಮಾಡುವುದನ್ನೇ ಇತ್ತೀಚೆಗೆ ಕೈಬಿಟ್ಟಿವ್ವಾರೆ. ನಮ್ಮ ಸರ್ಕಾರದವರು ಏನು ಹೇಳುತ್ತಾರೆಂದರೆ ನಮಗೊಂದು ಕೇಂದ್ರ ಸರ್ಕಾರದಿಂದ ಡೈರೆಕ್ಟಿವ್ ಇದೆ, ಇದು ನಮ್ಮ ಪಕ್ಷದ ಬಹುಮತ ಅಭಿಪ್ರಾಯ ಮತ್ತು ನೀತಿ ಎಂದು ಹೇಳುತ್ತಾರೆ. ನಾನು ನನ್ನ ಕೆಲವು ಕಾಂಗ್ರೆಸ್ ಸ್ನೇಹಿತರಲ್ಲಿ ಖುದ್ದಾಗಿ ಈ ವಿಷಯದಲ್ಲಿ ಮಾತನಾಡಿದ್ದೇನೆ. ಪ್ರತಿ ದಿವಸವೂ ಹಳ್ಳಿಗಳಲ್ಲಿ ಕಳ್ಳ ಭಟ್ಟಿ ಸಾರಾಯಿ ಹಾವಳಿ ಜಾಸ್ತಿಯಾಗುತ್ತಿರುವುದರಿಂದ ಶಾಂತಿ ರಕ್ಷಣೆಗೆ ತೊಂದರೆ ಬಂದಿದೆ ಮತ್ತು ಭಂಗ ವುಂಟಾಗಿದೆ. ಇದರಿಂದ ಪೋಲೀಸಿನವರ ಆಡಳಿತವೂ ಕೆಟ್ಟು ಹೋಗಲಿಕ್ಕೆ ಕಾರಣವಾಗುತ್ತಿದೆ. ಈ ಬಗ್ಗೆ ನಾನು ಚರ್ಚೆ ಮಾಡಿದಾಗ್ಗೆ ಅನೇಕ ಜನ ಕಾಂಗ್ರೆಸ್ಸಿನವರು ವೈಯಕ್ತಿಕವಾಗಿ ಇದು ಸಫಲವಾಗುವುದಿಲ್ಲವೆಂದು ಒಪ್ಪಿಕೊಂಡಿದ್ದಾರೆ. ಆದರೆ ಅವರ ಪಕ್ಷದಲ್ಲಿ ಅದನ್ನು ಹೇಳಿದರೆ ಅವರೆಲ್ಲಿ ಕಾಂಗ್ರೆಸ್ಸಿನ ದೃಷ್ಟಿಯಿಂದ ಕಡಮೆ ಜನರಾಗುತ್ತಾರೋ ಎಂದು ಅವರು ಈ ಸಭೆಯ ಮುಂದಾಗಲೀ ಅಥವಾ ಅವರ ಪಕ್ಷದ ಮುಂದಾಗಲೀ ಪ್ರತಿಭಟಿಸುವುದಕ್ಕೆ ತಯಾರಾಗಿಲ್ಲ. ಈ ಪಾನನಿರೋಧ ಕಾನೂನು ಒಟ್ಟಿನಲ್ಲಿ ಯಾವ ದೃಷ್ಟಿಯಿಂದಲೂ ಯಶಸ್ವಿಯಾಗಿಲ್ಲ. ಇದರಿಂದ ಇತ್ತೀಚೆಗೆ ಹೆಚ್ಚು ಜನ ಕುಡಿಯುವವರಾಗಿದ್ದಾರೆ. ಪೋಲೀಸಿನವರೇ ಕುಡಿಯುವುದಕ್ಕೆ ಹೊರಟಿದ್ದಾರೆ. ಅಂದಮೇಲೆ ಎಲ್ಲಾ ರೀತಿಯಿಂದ ನಮ್ಮ ದೇಶದ ಜನರ ನೈತಿಕ ಮಟ್ಟ ಕಡಮೆ ಮಾಡುವುದಕ್ಕೆ ದಾರಿಯಾಗಿದೆಯೇ ಹೊರತು ಮತ್ತೇನೂ ಇಲ್ಲ. ಆದ್ದರಿಂದ ಪಾನನಿರೋಧ ಶಾಸನವನ್ನು ರದ್ದು ಪಡಿಸಬೇಕೆಂದು ನಾನು ಸರ್ಕಾರವನ್ನು ಈ ಒತ್ತಾಯ ಪಡಿಸುತ್ತೇನೆ.

ಇನ್ನು ಪಿ. ಡಬ್ಲ್ಯು. ಡಿ. ವಿಷಯ. ಲೋಕೋಪಯೋಗಿ ಶಾಖೆಯವರು ನಮ್ಮ ದೇಶದಲ್ಲಿ ಬಹಳ ಹೆಚ್ಚಿನ ಕಾರ್ಯಗಳನ್ನು ಮತ್ತು ಕೆರೆ ಕಟ್ಟೆಗಳನ್ನು ಕಟ್ಟಿಸುವ ಕೆಲಸಗಳನ್ನೂ ಮತ್ತು ಯಾರೂ ಮಾಡದೇ ಇರುವ ಸಾಧನೆಗಳನ್ನು ಮಾಡಿದ್ದಾರೆಂದು ತಿಳಿಸುತ್ತಾರೆ. ಈ ದಿವಸ ಆ ಕೆಲಸಗಳನ್ನೆಲ್ಲಾ ಲೋಕೋಪಯೋಗಿ ಶಾಖೆಯವರು ಬಹಳ ತಮಾಷೆಯಿಂದ ನಡೆಸುತ್ತಿದ್ದಾರೆಂದು ನಾನು ಹೇಳಬೇಕಾಗಿದೆ. ಏಕೆಂದರೆ ಈ ದಿವಸ ಅವರು ಯಾವ ರೀತಿ ಹಣವನ್ನು ಖರ್ಚುಮಾಡುತ್ತಿದ್ದಾರೆಂಬುದು ನನಗೆ ಚೆನ್ನಾಗಿ ಗೊತ್ತು. ನನಗೆ ಒಬ್ಬ ಇಂಜನಿಯರ್ ಹೇಳುತ್ತಿದ್ದರು. ಯಾರು ಹೆಚ್ಚು ಹಣ ಖರ್ಚುಮಾಡಿದರೆ ಅವರು ಎಫಿಷಿಯಂಟ್ ಇಂಜಿನಿಯರ್ ಎಂದು. ಹಣ ಹೇಗೆ ಖರ್ಚುಮಾಡಿದರೂ ಜಾಸ್ತಿ ಹಣ ಯಾರು ಖರ್ಚು ಮಾಡಿದರೆ ಅವರು ಬಹಳ ಎಫಿಷಿಯಂಟ್ ಎಂದು ಅರ್ಥ ಹೇಳುತ್ತಿದ್ದರು. ಸುಮಾರು 20 ವರ್ಷಗಳಿಂದಲೂ ಎಷ್ಟೋ ಕೆರೆಗಳು ರಿಪೇರಿಯಾಗದೆ ಹಾಗೆಯೇ ಬಿದ್ದಿವೆ. ಕೆರೆಗಳನ್ನು ದುರಸ್ತು ಮಾಡುವ ಯೋಚನೆಗೆ ಪಿ. ಡಬ್ಲ್ಯು. ಡಿ ಯವರು ಹೋಗಲೇ ಇಲ್ಲ. ಯಾರಾದರೂ ಒಬ್ಬ ದೊಡ್ಡ ಕಂಟ್ರಾಕ್ಟರ್ ಅಥವಾ ಒಬ್ಬ ದೊಡ್ಡ ಮನುಷ್ಯ ಇರುವ ಕಡೆ ಪ್ರತಿ ವರ್ಷವೂ ಕೆರೆ ರಿಪೇರಿಯಾಗುತ್ತದೆ. ಒಂದು ವೇಳೆ ಆ ಒಬ್ಬ ಕಂಟ್ರಾಕ್ಟರ್ ಕಾಂಗ್ರೆಸ್ ಪಕ್ಷಕ್ಕೆ ಸೇರಿದವನಾಗಿದ್ದರೆ ಬೇಕಾದಷ್ಟು ಹಣವನ್ನು ಸರ್ಕಾರದಿಂದ ಪಡೆದು ಕೆರೆಯ ದುರಸ್ತಿ ಕಾಮಗಾರಿಯನ್ನು ನಡೆಸಿಕೊಳ್ಳುತ್ತಾನೆ. ಈ ರೀತಿಯಲ್ಲಿ ಹಣವನ್ನು ದುರ್ವ್ಯಯ ಮಾಡಿ ಅವರ ಪಕ್ಷದ ಕಂಟ್ರಾಕ್ಟರುಗಳಿಗೆ ಅನುಕೂಲ ಮಾಡಿಕೊಡುತ್ತಾರೆ. ಬಂಡಿತವಾಗಿ ಇಂಥಾದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು. ಯಾವಾಗಲೇ ಆಗಲಿ ಯಾವ ಒಬ್ಬ ಇಂಜನಿಯರನ್ನು ಕೇಳಿದರೂ ಅತನು ತನ್ನ ಕಾರ್ಯಕ್ಷೇತ್ರದಲ್ಲಿ ಎಷ್ಟೆಷ್ಟು ಕೆರೆಗಳಿವೆ, ಯಾವ್ಯಾವ ಕೆರೆಗಳು ದುರಸ್ತು ಆಗಿವೆ, ಯಾವ್ಯಾವ ಕೆರೆಗಳು ಇನ್ನೂ ದುರಸ್ತು ಆಗಲಿಲ್ಲ ಎಂಬುದನ್ನು